ಕೂಡಲೇ ಅವರನ್ನು ಕರೆಯಿಸಿಕೊಂಡು ಅಲ್ಲಿ ಅಪಾರ್ಟ್‌ಮೆಂಟ್ ಏನು ಕಟ್ಟುತ್ತಿದ್ದಾರೆ ಅದನ್ನು ನಿಲ್ಲಸಬೇಕು. ಈ ಜಾಗವನ್ನು ಯಾರಿಗಾಗಿ ಮೀಸಲಿಟ್ಟಿದ್ದರೋ ಅಲ್ಲಿ ಒಂದೆರಡು ತಲೆಮಾರಿನಿಂದ ಯಾರ್ಯಾರಿದ್ದರು ಅವರಿಗೆ 30-40 ಅಡಿ ಜಾಗವನ್ನು ಕೊಡಿ ಎಂದರೂ ಅವರು ಕೊಡುತ್ತಿಲ್ಲ. ಇದನ್ನು ಅರಿತುಕೊಂಡು ಅಲ್ಲಿ ಈಗ ಕಟ್ಟುತ್ತಿರುವ ಕಟ್ಟಡದ ಕೆಲಸವನ್ನು ಕೂಡಲೇ ಮಾನ್ಯ ಕಾರ್ಮಿಕ ಮಂತ್ರಿಗಳು ನಿಲ್ಲಿಸಬೇಕು. ಅಲ್ಲಿರತಕ್ಕ ಜನರಿಗೆ ಮೂಲಭೂತ ಸೌಲಭ್ಯಗಳನ್ನೊದಗಿಸಲು ಕೂಡಲೇ ವ್ಯವಸ್ಥೆ ಮಾಡುವಂತೆ ಆ ಕಾರ್ಖಾನೆಯ ಮಾಲೀಕರಿಗೆ ಸೂಚನೆ ನೀಡಬೇಕೆಂದು ಒತ್ತಾಯಮಾಡುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸಮಂಜಸ ಉತ್ತರ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೇ, ಕಾನೂನು ಬಹಿರವಾಗಿ ಯಾವುದೇ ಕೆಲಸ ಅಲ್ಲಿ ನಡೆಯುತ್ತಿದ್ದರೆ, ಅದಕ್ಕೆ ನಿರ್ಬಂಧಿಸಿ ಸೋಮಣ್ಣನವರು ಹೇಳಿದ ಹಾಗೆ ಒಂದು ಸಂಧಾನವನ್ನು ನಡೆಸಿ, ತೊಂದರೆಯಲ್ಲಿರತಕ್ಕಂತಹ ಕೆಲಸಗಾರರಿಗೆ ಒಳ್ಳೆಯ ಸವಲತ್ತುಗಳನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಹುಬ್ಬಳ್ಳಿ ಭೂ ನ್ಯಾಯ ಮಂಡಳಿ ಕುರಿತು

325 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಭೂ ನ್ಯಾಯ ಮಂಡಳಿಯಲ್ಲಿ ಚಾಲ್ತಿ ಇರುವ ಪ್ರಕರಣಗಳೆಷ್ಟು ಮತ್ತು ಅವುಗಳ ವಿಲೇವಾರಿಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಭೂ ನ್ಯಾಯ ಮಂಡಳಿ ಸದಸ್ಯರನ್ನು ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 16 ಅರ್ಜಿಗಳು.

ಆ) ಶೀಘ್ರದಲ್ಲೇ ಭೂ ನ್ಯಾಯ ಮಂಡಳಿ ಪುನರ್ ರಚಿಸಲಾಗುವುದು ಮತ್ತು ವಿಲೇವಾರಿಗೆ ಕ್ರಮ ತೆಗೆದುಕೊಳ್ಳಲಾಗುವುದು.

ಉತ್ತರವನ್ನು ಒದಗಿಸಿದ್ದೇನೆ ಮತ್ತು ಅದರ ಜೊತೆಗೆ ಸಂಬಂಧಿಸಿದ್ದಂತೆ ಇನ್ನು ಹೆಚ್ಚುವರಿ ಉತ್ತರವನ್ನು ಕೊಟ್ಟು ಬಿಡುತ್ತೇನೆ. ಒಟ್ಟು 3,084 ಅರ್ಜಿಗಳನ್ನು ಹಾಕಿದ್ದರು. 3,084 ಅರ್ಜಿಗಳನ್ನು ಕೂಡ ಪೂರ್ಣ ಮಾಡಿದ್ದಾರೆ. 108 ಕೇಸಗಳಲ್ಲಿ ಹೈಕೋರ್ಟಗೆ ಹೋಗಿದ್ದಾರೆ. ಅದರಲ್ಲಿ 19 ಕೇಸ್ ರಿಮ್ಯಾಂಡ್ ಆಗಿತ್ತು. ಇದರಲ್ಲಿ 3 ಕೇಸ್ ಡಿಸಪೋಸ್ ಆಯಿತು. ಇನ್ನು ಉಳಿದುಕೊಂಡಿರುವುದು 16 ಕೇಸಗಳು ಮಾತ್ರ ಬಾಕಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಇನ್ನು ಕೇಸಗಳು ಬಾಕಿ ಇರುವುದರಿಂದ, ಶೀಘ್ರದಲ್ಲಿಯೇ ಭೂ ನ್ಯಾಯಮಂಡಳಿಯನ್ನು ಪುನರ್ ರಚಿಸಲಾಗುವುದು ಎಂದು ಹೇಳಿದ್ದಾರೆ, ಈಗಾಗಲೇ ಜನತಾ ಧಳ

ಸರ್ಕಾರ ಬಂದು 9 ತಿಂಗಳುಗಳಾಯಿತು, ಇನ್ನು ಎಷ್ಟು ದಿವಸಗಳಲ್ಲಿ ಈ ಭೂ ನ್ಯಾಯ ಮಂಡಳಿಯನ್ನು ಪುನರ್ ರಚಿಸಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ : ಸಾಧ್ಯವಾದಷ್ಟು ಬೇಗ ಇದನ್ನು ಮಾಡಿ ಮುಗಿಸುತ್ತೇವೆ. ಇನ್ನು ಉಳಿದುಕೊಂಡಿರುವುದು ಬರೀ 16 ಕೇಸಗಳು.

ಶ್ರೀ ಜಗದೀಶ್ ಶೆಟ್ಟರ್ : ನನ್ನದು ಇನ್ನೊಂದು ಪ್ರಶ್ನೆ ಏನೆಂದರೆ ಇದಕ್ಕಿಂತ ಮೊದಲು ಒಂದು ವ್ಯವಸ್ಥೆ ಇತ್ತು. ಈ ಭೂ ನ್ಯಾಯ ಮಂಡಳಿಯ ಮೇಲೆ ಅಪೀಲ್ ಮಾಡಲು ಲ್ಯಾಂಡ್ ರಿಫಾರಂ ಅಪೀಲೇಟ್ ಟ್ರಿಬ್ಯೂನಲ್ ಇತ್ತು. ಆದರೆ ಇದು ಈಗ ಅಸ್ತಿತ್ವದಲ್ಲಿಲ್ಲ; ಇದರ ಬದಲಿ ಯಾವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ? ಅಥವಾ ಟೆನೆಂಟ್ಸ ಅಥವಾ ಲ್ಯಾಂಡ್ ಲಾರ್ಡ್ಸ್ ಹೈಕೋರ್ಟಿಗೆ ರಿಟ್ ಮಾಡಬೇಕೋ ಹೇಗೋ, ಅಥವಾ ಬದಲಿ ವ್ಯವಸ್ಥೆ ಏನಾದರೂ ಮಾಡಲಾಗಿದೆಯೋ ಏನೋ ಇದನ್ನು ಮಾನ್ಯ ಕಂದಾಯ ಸಚಿವರು ವಿವರಣೆಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಇರುವ ಪರಿಸ್ಥಿತಿಯ ಪ್ರಕಾರ ಕೋರ್ಟ್‌ಗೆ ಹೋಗಬೇಕಾಗುತ್ತದೆ. ಇದಕ್ಕೆ ಬದಲು ಒಂದು ಅಪಿಲೇಟ್ ಟ್ರಿಬ್ಯೂನಲ್ ಮಾಡಬೇಕೆಂದು ಹೇಳಿ, ಈಗಾಗಲೇ ಅಮೆಂಡ್‌ಮೆಂಟ್ ಎಲ್ಲಾ ಆಗಿದೆ. ಅದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ, ಇದು 4 ಇರಬೇಕೇ? 2 ಇರಬೇಕೇ? ಒಂದೇ ಇರಬೇಕೇ ಅದರ ಬಗ್ಗೆ ನಾವು ಯೋಚನೆಯನ್ನು ಮಾಡುತ್ತೇವೆ.

ರಸ್ತೆ ಸಾರಿಗೆ ಸಂಸ್ಥೆಯಿಂದ ಮೋಟಾರು ವಾಹನಗಳ ತೆರಿಗೆ

326 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಿ.ಟಿ.ಎಸ್. ಬಸ್ಸುಗಳಿಗೆ ಪಾವತಿ ಮಾಡುತ್ತಿರುವ ಆದಾಯದ ಮೇಲಿನ ಶೇಕಡಾವಾರು ಮೋಟಾರು ವಾಹನದ ತೆರಿಗೆ ಎಷ್ಟು?

ಆ) ಬಿ.ಟಿ.ಎಸ್. ಬಸ್ಸುಗಳಿಗೆ ಮೋಟಾರು ವಾಹನ ತೆರಿಗೆಯನ್ನು ಕಡಿಮೆ ಮಾಡುವ ಪ್ರಸ್ತಾವನೆ ಏನಾದರೂ ಇದೆಯೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಿ.ಟಿ.ಎಸ್. ವಿಭಾಗದಲ್ಲಿನ ಬಸ್ಸುಗಳಿಗೆ ಆದಾಯದ ಮೇಲೆ ಶೇ. 12 ರಷ್ಟು ಮೋಟಾರು ತೆರಿಗೆಯಾಗಿ ಪಾವತಿ ಮಾಡುತ್ತಿದೆ.

ಆ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಸಭಾಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಬಿ.ಟಿ.ಎಸ್. ವಿಭಾಗದಲ್ಲಿ ಬಸ್‌ಗಳ ಆದಾಯದ ಮೇಲೆ ಶೇಕಡ 12 ರಷ್ಟು ಮೋಟಾರ್ ತೆರಿಗೆಯನ್ನು ಪಾವತಿ